**O.S .No. 261/2018 6 DW -1**

**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ12-07-2023**

ಪಾಟೀ ಸವಾಲುಃ ಶ್ರೀಮತಿ ಎಸ್ ಕೆ ವಕೀಲರಿಂದ

ನಾನು **7** ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ವಾದಿ ನನ್ನ ತಮ್ಮನ ಹೆಂಡತಿ. ವಾದಿಯು ಅವರ ಜಾಗವನ್ನು ಒತ್ತುವರಿ ಮಾಡಿದ್ದೇವೆ ಎಂದು ದಾವಾ ದಾಖಲು ಮಾಡಿರುತ್ತಾರೆ. **1984** ರಲ್ಲಿ ನಮ್ಮ ಕುಟುಂಬದಲ್ಲಿ ಹಿಸ್ಸೆ ಆಗಿರುತ್ತದೆ. ನಿಪಿ-**2** ಸ್ಕೆಚ್ ನಲ್ಲಿ ಬಿ ಭಾಗ ಹಸಿರು ಬಣ್ಣದಿಂದ ಕೂಡಿದ ಜಾಗ ವಾದಿಗೆ ಸೇರಿದ ಜಾಗ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಸ್ಕೆಚ್ ಗೆ ಅನುಗುಣವಾಗಿ ವಿಸ್ತೀರ್ಣ ಇರುವುದಿಲ್ಲ, ಹಿಸ್ಸೆಯಲ್ಲಿ ವ್ಯತ್ಯಾಸ ಇರುತ್ತದೆ ಎಂದು ನುಡಿಯುತ್ತಾರೆ. ವಿಭಾಗದ ಸಮಯದಲ್ಲಿ ನಿಪಿ-**2** ಸ್ಕೆಚ್ ಅನ್ನು ನಾವೇ ಕುಟುಂಬದವರು ತಯಾರಿಸಿರುತ್ತೇವೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ವಿಭಾಗ ಮಾಡುವ ಕಾಲಕ್ಕೆ ಮನೆ ಒಳಗೆ ಬಂದು ಅಳತೆ ಮಾಡಿ ಸ್ಕೆಚ್ ಅನ್ನು ತಯಾರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಹಿಸ್ಸೆಗೆ ದಾವಾ ಐಟಂ ನಂಃ **1** ರಲ್ಲಿ ಪೂಪಃ **49** ವರೆ ಅಡಿ ಜಾಗ ಬಂದಿರುತ್ತದೆ ಆದರೆ ಉತ್ತರ ದಕ್ಷಿಣಕ್ಕೆ ಎಷ್ಟು ಜಾಗ ಇದೆ ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ನಾನು ಉತ್ತರ ದಕ್ಷಿಣ **35** ಅಡಿ ಜಾಗದಲ್ಲಿ ಸ್ವಾಧೀನ ಇದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಗೆ ಸೇರಿದ ಜಾಗವನ್ನು ಲಪಟಾಯಿಸುವ ಉದ್ದೇಶದಿಂದ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ತಾಯಿ ಕಳೆದ **35** ವರ್ಷಗಳಿಂದ ವಾದಿ ಜೊತೆ ಇದ್ದಾರೆ ಎಂದರೆ ಸರಿಯಲ್ಲ. ನಿಪಿ-**1** ವಿಭಾಗಪತ್ರ ಕುಟುಂಬದವರು ಒಪ್ಪಿ ಮಾಡಿಸಿದ ಪತ್ರ ಎಂದರೆ ಸರಿ ವಿಭಾಗವಾಗುವ ಕಾಲಕ್ಕೆ ನನ್ನ

ತಮ್ಮ ಶಿವಕುಮಾರ್ ಜೀವಂತ ಇದ್ದ ಎಂದರೆ ಸರಿ. ಅವರ ಹಿಸ್ಸೆಗೆ ಎಷ್ಟು ಅಡಿ ಜಾಗ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ.

ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಇ ಖಾತಾ ನೋಡಿದ್ದು ಅದು ವಾದಿ ಹೆಸರಿನಲ್ಲಿ ಇದೆ ಎಂದು ಸಾಕ್ಷಿದಾರರು ಒಪ್ಪಿದ ಮೇರೆಗೆ ಅದನ್ನು ನಿಪಿ-**24** ಎಂದು ಗುರುತಿಸಲಾಯಿತು. ಈ ಮೊದಲು ಅದಾ ನಂಃ **97/14** ರಂತೆ ವಾದಿ ಶಾಶ್ವತ ನಿರೋದಾಜ್ಞೆ ಕೋರಿ ನನ್ನ ವಿರುದ್ಧ ದಾವಾ ದಾಖಲು ಮಾಡಿದ್ದರು ಎಂದರೆ ಸರಿ. ನಾನು ಪದೇ ಪದೇ ವಾದಿಯ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದರಿಂದ ಸದರಿ ದಾವಾ ದಾಖಲು ಮಾಡಿದ್ದರು ಎಂದರೆ ಸರಿಯಲ್ಲ. ವಾದಿಯು ಕೆಲಸಕ್ಕೆ ಹೋಗಿದ್ದಾಗ ನಾನು ವಾದಿಗೆ ಸೇರಿದ ದಾವಾ ಐಟಂ ನಂಃ **1** ರಲ್ಲಿ ಒತ್ತುವರಿ ಮಾಡಿ ಹಲಗೆಯಿಂದ ಗೋಡೆ ನಿರ್ಮಾಣ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-**1** ವಿಭಾಗಪತ್ರದಲ್ಲಿ ಮಧ್ಯದ ಗೋಡೆ ಎಂದು ನಮೂದಾಗಿದ್ದು ಎಲ್ಲಿಯೂ ಹಲಗೆಯ ಗೋಡೆ ಎಂದು ನಮೂದಾಗಿಲ್ಲ ಎಂದರೆ ಸರಿ.

( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು)

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಿವಿಲ್ ನ್ಯಾಯಾಧೀಶರು,
ಸಕಲೇಶಪುರ